


بسم اللہِ الرّحمٰن الرّحيم

# ತಬೂಕ್ ಯುದ್ಧದ ತಯಾರಿ: ಸಹಾಬಿಯರ ತ್ಯಾಗ ಮತ್ತು ಕಪಟವಿಶ್ವಾಸಿಗಳ ಪಿತೂರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17–10–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಖುತ್ಬದಲ್ಲಿ ತಬೂಕ್ ಯುದ್ಧದ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿತ್ತು, ಇಂದು ನಾನು ಅದರ ಇನ್ನಷ್ಟು ವಿವರಣೆಯನ್ನು ನೀಡುತ್ತೇನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ತಬೂಕ್ ಯುದ್ಧದ ಹಿನ್ನೆಲೆಯನ್ನು ವಿವರಿಸುತ್ತಾ ಹೀಗೆ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಮಕ್ಕಾದ ಮೇಲೆ ವಿಜಯ ಸಾಧಿಸಿದ ವೇಳೆ ಅಬೂ ಆಮಿರ್ ಮದನಿ ಎಂಬ ಒಬ್ಬ ವ್ಯಕ್ತಿ ಇದ್ದನು. ಅವನು ಖಝ್ರಜ್ ಗೋತ್ರಕ್ಕೆ ಸೇರಿದವನಾಗಿದ್ದನು. ಅವನು ಯಹೂದಿಯರು ಮತ್ತು ಕ್ರೈಸ್ತರೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದ ಕಾರಣದಿಂದ ಅವನಿಗೆ ಜಪ–ತಪ ಮಾಡುವ ಅಭ್ಯಾಸವಿತ್ತು. ಆದ್ದರಿಂದ ಜನರು ಅವನನ್ನು ಸನ್ಯಾಸಿ ಎಂದು ಕರೆಯುತ್ತಿದ್ದರು, ಆದರೆ ಅವನು ಕ್ರೈಸ್ತ ಧರ್ಮದವನಾಗಿರಲಿಲ್ಲ. ಹಝ್ರತ್ ಪೈಗಂಬರ್(ಸ) ಮದೀನಾಕ್ಕೆ ಬಂದಾಗ ಈ ವ್ಯಕ್ತಿ ಮಕ್ಕಾದ ಕಡೆಗೆ ಹೋಗಿದ್ದನು. ಮಕ್ಕಾ ವಿಜಯದ ನಂತರ ಇಸ್ಲಾಮ್ ವಿರುದ್ಧ ಪಿತೂರಿ ಉಂಟುಮಾಡಲು ಬೇರೆ ಯಾವುದಾದರೂ ಹೊಸ ತಂತ್ರ ಮಾಡಬೇಕೆಂದು ಈತ ಯೋಚಿಸುತ್ತಿದ್ದನು. ಕೊನೆಗೆ, ಇವನು ತನ್ನ ಹೆಸರನ್ನು ಮತ್ತು ಉಡುಪನ್ನು ಬದಲಾಯಿಸಿ, ಮದೀನದ ಬಳಿಯ ಖುಬ ಎಂಬ ಗ್ರಾಮದಲ್ಲಿ ವಾಸಿಸಲು ಪ್ರಾರಂಭಿಸಿದ. ಬಹಳ ವರ್ಷಗಳ ಕಾಲ ಹೊರಗೆ ಇದ್ದುದರಿಂದ ಮದೀನದ ಜನರಿಗೆ ಇವನನ್ನು ಗುರುತಿಸಲಾಗಲಿಲ್ಲ. ಇವನು ಸ್ವತಃ ಸಂಬಂಧ ಬೆಳೆಸಿದ್ದ ಕಪಟವಿಶ್ವಾಸಿಗಳಿಗೆ ಮಾತ್ರ ಇವನ ಬಗ್ಗೆ ಗೊತ್ತಿತ್ತು.

ಇವನು ಮದೀನದ ಕಪಟವಿಶ್ವಾಸಿಗಳೊಂದಿಗೆ ಸೇರಿ ಹೀಗೆ ಯೋಜನೆ ಹಾಕಿದನು: ನಾನು ಸಿರಿಯಗೆ ಹೋಗಿ, ಅಲ್ಲಿನ ಕ್ರೈಸ್ತ ಸರ್ಕಾರ ಮತ್ತು ಅರೇಬಿಯದ ಕ್ರೈಸ್ತ ಗೋತ್ರಗಳನ್ನು ಪ್ರಚೋದಿಸಿ ಮದೀನದ ಮೇಲೆ ದಾಳಿ ಮಾಡಲು ಅವರನ್ನು ಪ್ರೇರೇಪಿಸುತ್ತೇನೆ. ಇಲ್ಲಿ, ನೀವು ಸಿರಿಯಾದ ಸೈನ್ಯವು ಮದೀನದ ಮೇಲೆ ದಾಳಿ ಮಾಡುತ್ತಿದೆ ಎಂದು ವದಂತಿಗಳನ್ನು ಹರಡಲು ಪ್ರಾರಂಭಿಸಬೇಕು.

ರೋಮನ್ನರನ್ನು ಎದುರಿಸಲು ವಿಳಂಬ ಮಾಡಿದರೆ, ಅದರ ನಷ್ಟಗಳು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ರೋಮನ್ನರಿಗೆ ದಾಳಿ ಮಾಡುವ ಅವಕಾಶ ನೀಡದೆ, ಅವರ ಪ್ರದೇಶಕ್ಕೆ ಹೋಗಿ ನಿರ್ಣಾಯಕ ಯುದ್ಧ ಮಾಡಬೇಕು ಎಂದು ಈ ವದಂತಿಗಳ ಆಧಾರದ ಮೇಲೆ ಹಝ್ರತ್ ಪೈಗಂಬರ್(ಸ) ತೀರ್ಮಾನಿಸಿದರು.

ಹಝ್ರತ್ ಪೈಗಂಬರ್(ಸ) ಸಾಮಾನ್ಯವಾಗಿ ತಮ್ಮ ಯುದ್ಧ ಕಾರ್ಯಾಚರಣೆಗಳನ್ನು ರಹಸ್ಯವಾಗಿ ಇಡುತ್ತಿದ್ದರು, ಆದರೆ ಖೈಬರ್ ಯುದ್ಧದ ನಂತರ ತಬೂಕ್ ಯುದ್ಧದ ಕುರಿತು ಹಝ್ರತ್ ಪೈಗಂಬರ್(ಸ) ಸಾರ್ವಜನಿಕವಾಗಿ ಘೋಷಿಸಿದರು. ದಾರಿಯ ಕಷ್ಟಗಳು ಹಾಗೂ ಶತ್ರುಗಳು ಅಧಿಕವಿರುವುದರ ಬಗ್ಗೆ ಜನರಿಗೆ ಮೊದಲೇ ತಿಳಿಸಿದರು.

ಅದು ಬರಗಾಲದ ವರ್ಷವಾಗಿತ್ತು, ಆಹಾರದ ಕೊರತೆ ಇತ್ತು. ಜನರು ತಮ್ಮ ಬೆಳೆಗಳನ್ನು ಸಂಗ್ರಹಿಸುವ ಚಿಂತೆಯಲ್ಲಿದ್ದರು. ಅಷ್ಟರಲ್ಲಿ ಜಿಹಾದ್‌ಗೆ ಹೊರಡುವ ಕುರಿತು ಘೋಷಣೆಯಾಯಿತು. ಇದರ ಜೊತೆಗೆ ಬೇಸಿಗೆಯ ಕಾಲ, ನೂರಾರು ಮೈಲಿಗಳ ಪ್ರಯಾಣ ಮತ್ತು ಆಹಾರದ ಕೊರತೆಯ ಸಮಸ್ಯೆ ಕೂಡ ಇತ್ತು. ಈ ಎಲ್ಲ ಸಮಸ್ಯೆಗಳಿದ್ದರೂ, ಹಝ್ರತ್ ಪೈಗಂಬರ್(ಸ)ರಿಂದ ಜಿಹಾದ್‌ಗೆ ಹೋಗಲು ಆದೇಶವಾದಾಗ, ತ್ಯಾಗಶಾಲಿ ಸಹಾಬಿಯರು ಜಿಹಾದ್‌ಗೆ ಸಿದ್ಧತೆ ಮಾಡತೊಡಗಿದರು.

ಈ ಸಂದರ್ಭದಲ್ಲಿ ಶ್ರೀಮಂತ ಸಹಾಬಿಯರೊಡನೆ ಧನತ್ಯಾಗ ಮಾಡಲು ಹಝ್ರತ್ ಪೈಗಂಬರ್(ಸ) ಮನವಿ ಮಾಡಿದಾಗ, ಮೊತ್ತಮೊದಲಾಗಿ ಹಝ್ರತ್ ಅಬೂಬಕರ್ ಸಿದ್ದೀಖ್(ರ) ತಮ್ಮ ಮನೆಯ ಸಂಪೂರ್ಣ ಆಸ್ತಿಯನ್ನು ತೆಗೆದುಕೊಂಡು ಬಂದರು. ಹಝ್ರತ್ ಉಸ್ಮಾನ್(ರ) ಈ ಯುದ್ಧದ ಸಂದರ್ಭದಲ್ಲಿ ಮುನ್ನೂರು ಸಿದ್ಧಪಡಿಸಿದ ಒಂಟೆಗಳನ್ನು ಅವುಗಳ ಪೀಠ ಸಮೇತ ನೀಡಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: 'ಉಸ್ಮಾನ್ ಇದರ ನಂತರ ಏನು ಮಾಡಿದರೂ ಅವರ ಮೇಲೆ ಯಾವುದೇ ಹಿಡಿತವಿಲ್ಲ.' ಒಂದು ವರದಿಯ ಪ್ರಕಾರ, ಹಝ್ರತ್ ಉಸ್ಮಾನ್(ರ) ಈ ಸಂದರ್ಭದಲ್ಲಿ ಒಂದು ಸಾವಿರ ದೀನಾರ್‌ಗಳನ್ನು

ಸಹ ನೀಡಿದ್ದರು ಎಂದಿದೆ. ಇನ್ನೊಂದು ವರದಿಯ ಪ್ರಕಾರ, ಹಝ್ರತ್ ಉಸ್ಮಾನ್(ರ) ಈ ಸಂದರ್ಭದಲ್ಲಿ ಒಂದು ಸಾವಿರ ಒಂಟೆಗಳನ್ನು ಮತ್ತು ಎಪ್ಪತ್ತು ಕುದುರೆಗಳನ್ನು ನೀಡಿದ್ದರು ಎಂದಿದೆ. ಕೆಲವು ವರದಿಗಳ ಪ್ರಕಾರ, ಈ ಯುದ್ಧದ ಎಲ್ಲ ಖರ್ಚುವೆಚ್ಚಗಳನ್ನು ಹಝ್ರತ್ ಉಸ್ಮಾನ್(ರ) ನೆರವೇರಿಸಿದ್ದರು ಎಂದಿದೆ.

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಬಗ್ಗೆ ಉಲ್ಲೇಖಿಸಲಾಗಿದ್ದು ಏನೆಂದರೆ, ಅವರು ಈ ಸಂದರ್ಭದಲ್ಲಿ ನೂರು ಅಥವಾ ಒಂದು ವರದಿಯ ಪ್ರಕಾರ ಇನ್ನೂರು ಅಥವಾ ನಾನ್ನೂರು **ಔಕಿಯ** ಬೆಳ್ಳಿಯನ್ನು ನೀಡಿದ್ದರು ಎಂದಾಗಿದೆ.

(ಹುಝೂರ್ ಹೇಳಿದರು:) ಅಹ್ಮದಿಯಾ ಜಮಾಅತಿನ ಸದಸ್ಯರು ಕೂಡ ಆರ್ಥಿಕ ತ್ಯಾಗಗಳ ಮಹತ್ವವನ್ನು ತಿಳಿದವರಾಗಿದ್ದಾರೆ. ನಾನು ಆಗಾಗ್ಗೆ ಘಟನೆಗಳನ್ನು ವಿವರಿಸಿ ಆವಶ್ಯಕತೆಯನ್ನು ಮುಂದಿಟ್ಟಾಗ ಕೆಲವರು ನಿಜವಾಗಿಯೂ ತಮ್ಮ ಬಳಿ ಇರುವ ಎಲ್ಲವನ್ನೂ ನೀಡುತ್ತಾರೆ. ಶ್ರೀಮಂತರಾಗಿರುವರು ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಉಸ್ಮಾನ್(ರ)ರ ಮಾದರಿಗಳನ್ನು ತಮ್ಮ ಮುಂದೆ ಇರಿಸಿಕೊಳ್ಳಬೇಕು. ಅಲ್ಲಾಹನ ಕೃಪೆಯಿಂದ ಅನೇಕ ಶ್ರೀಮಂತರು ಉನ್ನತ ಮಟ್ಟದ ತ್ಯಾಗಗಳನ್ನು ಮಾಡುತ್ತಿದ್ದಾರೆ.

ಈ ಸಂದರ್ಭದಲ್ಲಿ ಶ್ರೀಮಂತ ಸಹಾಬಿಯರ ಜೊತೆಗೆ, ಬಡ ಮತ್ತು ನಿರ್ಗತಿಕ ಸಹಾಬಿಯರು ಕೂಡ ತಮ್ಮ ಸಾಮರ್ಥ್ಯಕ್ಕೆ ಅನುಸಾರ ಆರ್ಥಿಕ ತ್ಯಾಗಗಳನ್ನು ಮಾಡಿದ್ದರು. 'ಇವರು ಒಂದು ಹಿಡಿ ಧಾನ್ಯಗಳನ್ನು ನೀಡಿ ರೋಮನ್ನರೊಂದಿಗೆ ಯುದ್ಧಕ್ಕೆ ಸಿದ್ಧತೆ ಮಾಡುತ್ತಿದ್ದಾರೆ' ಎಂದು ಕಪಟವಿಶ್ವಾಸಿಗಳು ಈ ಬಡ ಸಹಾಬಿಯರ ತ್ಯಾಗಗಳ ಕುರಿತು ಗೇಲಿ ಮಾಡುತ್ತಿದ್ದರು. ಮಹಿಳೆಯರು ಕೂಡ ಈ ಸಂದರ್ಭದಲ್ಲಿ ತಮ್ಮ ಆಭರಣಗಳನ್ನು ನೀಡುವ ಮೂಲಕ ಆರ್ಥಿಕ ತ್ಯಾಗದಲ್ಲಿ ಪಾಲ್ಗೊಂಡರು.

ಮುಸ್ಲಿಮರನ್ನು ಯುದ್ಧಕ್ಕೆ ಹೋಗದಂತೆ ತಡೆಯಲು ಕಪಟವಿಶ್ವಾಸಿಗಳು ತಮ್ಮ ಕಡೆಯಿಂದ ಸಂಪೂರ್ಣ ಪ್ರಯತ್ನ ಮಾಡುತ್ತಲೇ ಇದ್ದರು. 'ಬಿಸಿಲು ತೀವ್ರವಾಗಿದೆ, ಎದುರಿಸಲಿರುವ ಶತ್ರು ಬಹಳ ಶಕ್ತಿಶಾಲಿ' ಎಂದೆಲ್ಲ ಕಪಟವಿಶ್ವಾಸಿಗಳು ಹೇಳುತ್ತಿದ್ದರು. ಮದೀನದ ಜನರು ಕೃಷಿಕರಾಗಿದ್ದರು ಮತ್ತು ಅದು ಬೆಳೆಗಳನ್ನು ಕೊಯ್ಯುವ ಸಮಯವಾಗಿತ್ತು. ಕಪಟವಿಶ್ವಾಸಿಗಳು ಜನರನ್ನು ಯುದ್ಧಕ್ಕೆ ಹೋಗದಂತೆ ತಡೆಯುತ್ತಿದ್ದರು, ಆದರೆ ನಿಷ್ಠಾವಂತ ಸಹಾಬಿಯರ ಮೇಲೆ ಅವರ ಪ್ರಚಾರದ ಯಾವುದೇ ಪರಿಣಾಮ ಉಂಟುಮಾಡಲಿಲ್ಲ.

ಕಪಟವಿಶ್ವಾಸಿಗಳು ಹಝ್‌ರತ್ ಪೈಗಂಬರ್(ಸ)ರ ಮುಂದೆ ಹಾಜರಾಗಿ ಯುದ್ಧಕ್ಕೆ ಹೋಗದೇ ಇರಲಿಕ್ಕಾಗಿ ನೆಪಗಳನ್ನು ಹೇಳುತ್ತಿದ್ದರು. ಅವರೆಲ್ಲರಿಗೂ ಹಝ್‌ರತ್ ಪೈಗಂಬರ್(ಸ) ಅನುಮತಿ ನೀಡುತ್ತಿದ್ದರು. ಆದರೆ ಪವಿತ್ರ ಖುರ್‌ಆನ್ ಈ ಎಲ್ಲ ಕಪಟವಿಶ್ವಾಸಿಗಳ ಕಪಟತೆಯನ್ನು ಬಯಲುಮಾಡಿತು. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: ಅದು ಶೀಘ್ರವೇ ದೊರಕುವ ಲಾಭವಾಗಿರುತ್ತಿದ್ದರೆ ಹಾಗೂ ಸುಗಮ ಪ್ರಯಾಣವಾಗಿರುತ್ತಿದ್ದರೆ ಕಪಟವಿಶ್ವಾಸಿಗಳು ನಿನ್ನನ್ನು ಹಿಂಬಾಲಿಸುತ್ತಿದ್ದರು. ಆದರೆ ಕ್ಲೇಶಕರವಾದ ಯಾತ್ರೆಯಿಂದ ಅವರು ದೂರ ಉಳಿದರು. ಹಾಗಿದ್ದರೂ ಅವರು ಅಲ್ಲಾಹನ ಮೇಲೆ ಆಣೆಹಾಕಿ ನಮಗೆ ಸಾಧ್ಯವಿರುತ್ತಿದ್ದರೆ ನಿಮ್ಮೊಂದಿಗೆ ನಾವು ಸಹ ಹೊರಡುತ್ತಿದ್ದೆವು ಎಂದು ಹೇಳುವರು. ಅವರು ತಮ್ಮನ್ನೇ ನಾಶಪಡಿಸುತ್ತಿದ್ದಾರೆ. ಖಂಡಿತವಾಗಿಯೂ ಅವರು ಸುಳ್ಳು ಹೇಳುತ್ತಿದ್ದಾರೆಂದು ಅಲ್ಲಾಹನು ಚೆನ್ನಾಗಿ ಬಲ್ಲನು. ಅಲ್ಲಾಹನು ನಿನ್ನ ಕೊರತೆಗಳನ್ನು ಹೋಗಲಾಡಿಸಿರುವವನು. ಸತ್ಯ ಹೇಳುವವರು ಯಾರೆಂದು ನಿನಗೆ ಸ್ಪಷ್ಟವಾಗುವ ತನಕ ಹಾಗೂ ಸುಳ್ಳು ಹೇಳುವವರು ಯಾರೆಂದು ನೀನು ತಿಳಿಯುವ ತನಕ ನಿನ್ನೊಟ್ಟಿಗೆ ಸೇರಿ ಯುದ್ಧ ಮಾಡುವುದರಿಂದ ಬಿಟ್ಟುನಿಲ್ಲಲು ನೀನೇಕೆ ಅವರಿಗೆ ಅನುಮತಿ ನೀಡಿದೆ? ಅಲ್ಲಾಹನಲ್ಲೂ ಅಂತ್ಯದಿನದಲ್ಲೂ ವಿಶ್ವಾಸವುಳ್ಳವರು ತಮ್ಮ ಸಂಪತ್ತು ಮತ್ತು ಶರೀರ ಮೂಲಕ ಹೋರಾಡುವುದರಿಂದ ಬಿಟ್ಟು ನಿಲ್ಲಲು ನಿನ್ನೊಡನೆ ಅನುಮತಿ ಕೇಳಲಾರರು. ಭಯಭಕ್ತಿಯುಳ್ಳವರ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ. ಅಲ್ಲಾಹನಲ್ಲೂ ಅಂತ್ಯದಿನದಲ್ಲೂ ವಿಶ್ವಾಸವಿಲ್ಲದವರೂ ಹೃದಯಗಳಲ್ಲಿ ಸಂಶಯವುಳ್ಳವರೂ ಮಾತ್ರ ಹಿಂದೆ ಉಳಿಯಲು ನಿನ್ನೊಡನೆ ಅನುಮತಿ ಕೇಳುವರು. ಹಾಗೆ ಅವರು ತಮ್ಮ ಸಂಶಯದಲ್ಲಿ ತೊಳಲಾಡುತ್ತಿದ್ದಾರೆ. ಅವರು ನಿಜವಾಗಿಯೂ ಯುದ್ಧಕ್ಕೆ ಹೊರಡಲು ಉದ್ದೇಶಿಸಿರುತ್ತಿದ್ದರೆ, ಅದಕ್ಕೆ ಬೇಕಾದ ಸಿದ್ಧತೆಗಳನ್ನು ಅವರು ಮಾಡುತ್ತಿದ್ದರು. ಆದರೆ ಅವರು ಯುದ್ಧಕ್ಕೆ ಹೊರಡುವುದನ್ನು ಅಲ್ಲಾಹನು ಇಷ್ಟಪಡಲಿಲ್ಲ. ಆದ್ದರಿಂದ ಕಪಟವಿಶ್ವಾಸಿಗಳು ಹಿಂದೆ ಉಳಿಯುವಂತೆ ಅವನು ಮಾಡಿದನು. ಅವರೊಡನೆ ಹೇಳಲಾಯಿತು: ಮನೆಯಲ್ಲಿ ಕುಳಿತವರೊಂದಿಗೆ ನೀವು ಸಹ ಕುಳಿತುಕೊಳ್ಳಿರಿ. ನಿಮ್ಮೊಂದಿಗೆ ಅವರು ಸಹ ಹೊರಟಿರುತ್ತಿದ್ದರೆ, ಉಪದ್ರವನ್ನಲ್ಲದೆ ಬೇರೇನನ್ನೂ ಅವರು ನಿಮಗೆ ಕೊಡುತ್ತಿರಲಿಲ್ಲ. ನಿಮ್ಮ ಮಧ್ಯೆ ಅತ್ತಿತ್ತ ಓಡಾಡಿ ಅವರು ಗಲಭೆ – ಗೊಂದಲಗಳನ್ನು ಸೃಷ್ಟಿಸುತ್ತಿದ್ದರು. ನಿಮ್ಮ ಪೈಕಿ ಕೆಲವರು ಅವರ ಮಾತನ್ನು ಕೇಳಲು ಬಯಸುತ್ತಾರೆ. ಅಲ್ಲಾಹನಾದರೋ ದುಷ್ಕರ್ಮಿಗಳ ಬಗ್ಗೆ ಚೆನ್ನಾಗಿ ಬಲ್ಲವನಾಗಿದ್ದಾನೆ. ಇದಕ್ಕಿಂತ ಮೊದಲು ಸಹ ಗೊಂದಲವನ್ನುಂಟು ಮಾಡಲು ಅವರು ಬಯಸಿದ್ದರು. ನಿನ್ನ ವಿರುದ್ಧ ಅವರು ಪಿತೂರಿ ಹೂಡಿದ್ದರು. ಕೊನೆಗೆ ಅವರು ದ್ವೇಷಿಸುತ್ತಿರುವಂತೆಯೇ ಸತ್ಯ ಪ್ರಕಟವಾಗಿ ಅಲ್ಲಾಹನ ಉದ್ದೇಶ ಸಫಲವಾಯಿತು.

(ಹುಝೂರ್ ಹೇಳಿದರು:) ಇದರ ಉಳಿದ ಭಾಗವನ್ನು ನಾನು ಇನ್‌ಶಾಅಲ್ಲಾಹ್ ಮುಂದಿನ ಬಾರಿ ಹೇಳುತ್ತೇನೆ.

(ರಬ್ವದ ಮಸೀದಿಯ ಮೇಲೆ ನಡೆದ ದಾಳಿಯ ಪರಿಣಾಮವಾಗಿ ಗಾಯಗೊಂಡಿರುವ ಧೀರ ಖುದ್ದಾಮರ ಬಗ್ಗೆ ಪ್ರಸ್ತಾಪಿಸುತ್ತಾ ಹುಝೂರ್ ಹೀಗೆ ಹೇಳಿದರು:) ಕಳೆದ ಖುತ್ಬದಲ್ಲಿ ರಬ್ವದ ಮಸೀದಿಯ ಮೇಲಿನ ದಾಳಿಯ ಬಗ್ಗೆ ನಾನು ಪ್ರಸ್ತಾಪಿಸಿದ್ದೆ. ಗಾಯಗೊಂಡಿರುವ ಅಹ್ಮದಿ ಖುದ್ದಾಮ್‌ರಿಗಾಗಿ ನೀವೆಲ್ಲರೂ ದುಆ ಮಾಡಿರಿ. ಅಲ್ಲಾಹನು ಅವರಿಗೆ ಸಂಪೂರ್ಣ ಆರೋಗ್ಯವನ್ನು ಕರುಣಿಸಲಿ. ಅಲ್ಲಾಹನು ಅವರನ್ನು ನಂತರದ ಎಲ್ಲ ತೊಡಕುಗಳಿಂದಲೂ ರಕ್ಷಿಸಲಿ. ಈಗ ಮೂವರು ಖುದ್ದಾಮರು ಹೆಚ್ಚು ಗಾಯಗೊಂಡಿರುವವರು. ಅವರು ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ ಮತ್ತು ಉಳಿದ ಐವರನ್ನು ಚಿಕಿತ್ಸೆಯ ನಂತರ ಮನೆಗೆ ಕಳುಹಿಸಲಾಗಿದೆ. ಆದರೆ ಅವರ ಗಾಯಗಳು ವಾಸಿಯಾಗಲು ಇನ್ನೂ ಸಮಯ ಬೇಕಾಗುವುದು. ಅಲ್ಲಾಹನು ಅವರೆಲ್ಲರಿಗೂ ಸಂಪೂರ್ಣ ಆರೋಗ್ಯವನ್ನು ಕರುಣಿಸಲಿ. ಇನ್ನು ಮುಂದೆಯೂ ಜಮಾಅತಿನ ಸದಸ್ಯರನ್ನು ಪ್ರತಿಯೊಂದು ಸ್ಥಳದಲ್ಲಿಯೂ ಎಲ್ಲ ಕೇಡುಕು ಮತ್ತು ಹಾನಿಯಿಂದ ಅಲ್ಲಾಹನು ರಕ್ಷಿಸಲಿ.

(ಖುತ್ಬದ ಕೊನೆಯಲ್ಲಿ ಹುಝೂರ್ ಒಬ್ಬ ದಿವಂಗತರ ಬಗ್ಗೆ ಪ್ರಸ್ತಾಪಿಸಿದರು. ಅವರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು. ಅವರ ಕುಟುಂಬದ ಕೆಲವು ಜನರು ಅಹ್ಮದಿಯರಲ್ಲ. ಅಲ್ಲಾಹನು ಅವರಿಗೂ ಅಹ್ಮದಿಯಾಗಲು ತೌಫೀಖ್ ನೀಡಲಿ ಎಂದು ಹುಝೂರ್ ದುಆ ಮಾಡಿದರು.)

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

At, ***'Masjid Mubarak',*** *Islamabad, Tilford,* U.K. On 17-10-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon